RNU AIR DHARWAD

# OCTOBER 19, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಬೆಳಗಾವಿ ಸುವರ್ಣ ಸೌಧದಲ್ಲಿ, ಡಿಸೆಂಬರ್ ನಲ್ಲಿ, ವಿಧಾನಮಂಡಲ ಚಳಿಗಾಲದ ಅಧಿವೇಶನ – ಯು.ಟಿ. ಖಾದರ್.

- ಕೃತಕ ಬುದ್ಧಿಮತ್ತೆ ಬಳಸಿ ಬೋಧಿಸುವ, 'ಶಿಕ್ಷ ಕೋ ಪೈಲಟ್' ಯೋಜನೆ, ರಾಜ್ಯಾದ್ಯಂತ ಜಾರಿಗೆ – ಮಧು ಬಂಗಾರಪ್ಪ.

- ಸ್ವಚ್ಛತೆಯೇ ಸೇವೆ ಪಾಕ್ಷಿಕ; ಚಿಕ್ಕಮಗಳೂರು ರಾಜ್ಯಕ್ಕೆ ಪ್ರಥಮ – ಎಚ್.ಎಸ್. ಕೀರ್ತನಾ.
- ಎಚ್.ಐ.ವಿ/ಏಡ್ಸ್ ಜಾಗೃತಿಗಾಗಿ, ಬೆಳಗಾವಿಯಲ್ಲಿ 'ರೆಡ್ ರನ್ ಮ್ಯಾರಥಾನ್', ಇದೀಗ ಆರಂಭ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯ ವಿಧಾನಮಂಡಲ ಚಳಿಗಾಲದ ಅಧಿವೇಶನ, ಡಿಸೆಂಬರ್ ತಿಂಗಳಲ್ಲಿ ಬೆಳಗಾವಿಯ ಸುವರ್ಣ ಸೌಧದಲ್ಲಿ, ನಡೆಯಲಿದೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹಾಗೂ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು, ಸುವರ್ಣಸೌಧದ ವಿವಿಧ ಸಭಾಂಗಣಗಳನ್ನು ವೀಕ್ಷಿಸಿದರು.

<><><>

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಯು.ಟಿ. ಖಾದರ್, ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯಲಿದೆ. ಅಧಿವೇಶನದ ನಿರ್ದಿಷ್ಟ ದಿನಾಂಕವನ್ನು ಸಚಿವ ಸಂಪುಟ ತೀರ್ಮಾನಿಸಲಿದೆ. ಬಳಿಕ ಮುಖ್ಯಮಂತ್ರಿಯವರು ಘೋಷಿಸಲಿದ್ದಾರೆ ಎಂದರು.

<><><>

ಬಸವರಾಜ ಹೊರಟ್ಟಿ ಅವರು ಮಾತನಾಡಿ, ಡಿಸೆಂಬರ್ 9 ರಿಂದ 20ರ ವರೆಗೆ ಚಳಿಗಾಲದ ಅಧಿವೇಶನ ನಡೆಯುವ ಸಾಧ್ಯತೆಯಿದೆ. ಸದನದ ಕಲಾಪಗಳಲ್ಲಿ, ಶಾಸಕರ ಪಾಲ್ಗೊಳ್ಳುವಿಕೆ ಹೆಚ್ಚಿಸಲು, ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

ಕೃತಕ ಬುದ್ಧಿಮತ್ತೆ ಬಳಸಿಕೊಂಡು, ಡಿಜಿಟಲ್ ಮಾಧ್ಯಮದಲ್ಲಿ ಶಿಕ್ಷಕರು ಮಕ್ಕಳಿಗೆ ಬೋಧಿಸುವ, 'ಶಿಕ್ಷಣ–ಕೋ ಪೈಲಟ್' ಯೋಜನೆ, ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ವಿಧಾನಸೌಧದಲ್ಲಿ, 'ಶಿಕ್ಷಣ–ಕೋ ಪೈಲಟ್' ಕಾರ್ಯಕ್ರಮಕ್ಕೆ ಸಚಿವರು ಚಾಲನೆ ನೀಡಿದರು. ಡಿಜಿಟಲ್ ಆಪ್ ಮೂಲಕ, ಪಠ್ಯದ ಸಂಪೂರ್ಣ ನಕ್ಷೆಯನ್ನು, ಸಿದ್ಧಪಡಿಸಿದ್ದು ಶಿಕ್ಷಕರು ವಿ 'ಯಕ್ಕೆ ಅನುಗುಣವಾಗಿ, ಮಕ್ಕಳಿಗೆ ಬೋಧಿಸಬಹುದು. ರಾಜ್ಯದ ಗ್ರಾಮೀಣ ಭಾಗದ 750 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಂದ, ಸಾವಿರ ಶಿಕ್ಷಕರನ್ನು ಈ ಕಾರ್ಯಕ್ರಮದಡಿ ತರಬೇತಿಗೆ ಆಯ್ಕೆ ಮಾಡಲಾಗಿದೆ. ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 57 ಲಕ್ಷ ಮಕ್ಕಳಿಗೆ, ಈ ಲಾಭ ತಲುಪಲಿದೆ ಎಂದರು.

<><><>

ಸರ್ಕಾರಿ ಸೇವೆಯಲ್ಲಿರುವ ಶೇಕಡ 10ರಷ್ಟು, ಪ್ರಾಮಾಣಿಕ ಮತ್ತು ಸೇವಾತತ್ಪರ ಅಧಿಕಾರಿಗಳಿಂದ, ನಾಡಿನ ಆಡಳಿತ ಯಂತ್ರ ಸುದೃಢವಾಗಿದೆ ಎಂದು, ಉಪ ಲೋಕಾಯುಕ್ತ ನ್ಯಾಯಮೂರ್ತಿ ಬೀರಪ್ಪ ಹೇಳಿದ್ದಾರೆ. ತುಮಕೂರಿನ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಮಾತನಾಡಿದರು. ಲೋಕಾಯುಕ್ತಕ್ಕೆ ಗಣನೀಯವಾಗಿ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಅಧಿಕಾರಿಗಳ ಮೇಲೆ ಒತ್ತಡ ಹೇರುವ ಪ್ರಯತ್ನದಿಂದ, ನೈಜ ಪ್ರಕರಣಗಳ ವಿಚಾರಣೆಗೆ ಸಾಕಷ್ಟು ವಿಳಂಬವಾಗುತ್ತಿದೆ, ಎಂದರು. ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ಮಾತನಾಡಿ, ಸಾರ್ವಜನಿಕರಿಗೆ ಸಕಾಲದಲ್ಲಿ ಸೌಲಭ್ಯವನ್ನು ತಲುಪಿಸುವುದು, ಅಧಿಕಾರಿಗಳ ಹೊಣೆ. ವಿನಾಕಾರಣ ವಿಳಂಬ ಧೋರಣೆ, ಸಾರ್ವಜನಿಕರು ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಳ್ಳುವಂಥ ಸ್ಥಿತಿ ನಿರ್ಮಾಣಕ್ಕೆ ಕಾರಣ, ಎಂದರು.

<><><>

ಕೇಂದ್ರ ಸರ್ಕಾರ ದೇಶಾದ್ಯಂತ, ಅಗತ್ಯ ಪೌಷ್ಟಿಕ ಆಹಾರ ವಿತರಿಸಲು, ಸಿರಿಧಾನ್ಯಗಳ ಖರೀದಿಯನ್ನು ಹೆಚ್ಚಿಸಿದೆ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಅವರು, ಮುಂಗಾರು ಮಾರುಕಟ್ಟೆ ಋತುವಿನಲ್ಲಿ, 12 ಲಕ್ಷದ 49 ಸಾವಿರ ಮೆಟ್ರಿಕ್ ಟನ್ ಸಿರಿಧಾನ್ಯ ಖರೀದಿ ಮಾಡಿದೆ ಎಂದು ಮಾಹಿತಿ ನೀಡಿದ್ದಾರೆ.

<><><>

ಸತತ ಮಳೆಯಿಂದ, ತೇವಾಂಶ ಹೆಚ್ಚಿ ಹಾವೇರಿ ಜಿಲ್ಲೆಯಾದ್ಯಂತ, ಟೊಮ್ಯಾಟೊ ಬೆಳೆಗೆ ಅಂಗಮಾರಿ ರೋಗ ಬಾಧೆ ಕಾಣಿಸಿಕೊಂಡಿದೆ. ತೋಟಗಾರಿಕೆ ಇಲಾಖೆಯ ಹಾವೇರಿ ಜಿಲ್ಲೆ ಹಿರಿಯ ಸಹಾಯಕ ನಿರ್ದೇಶಕ ನೂರ್ ಅಹ್ಮದ ಹಲಗೇರಿ, ಟೊಮ್ಯಾಟೊ ಬೆಳೆಗಾರರು ಅನುಸರಿಸಬೇಕಾದ ಕ್ರಮ ಹಾಗೂ ರೋಗ ಹತೋಟಿ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ನೂರ್ ಅಹ್ಮದ್ ಹಲಗೇರಿ ಧ್ವನಿ 40 ಸೆಕೆಂಡುಗಳು

<><><>

ಈಗ ಪ್ರಕಟಣೆ..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

(42 ಸೆಕೆಂದುಗಳು)

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸ್ವಚ್ಛ ಭಾರತ ಅಭಿಯಾನದ, ದಶಮಾನೋತ್ಸವದ ಹಿನ್ನೆಲೆ, 'ಸ್ವಭಾವ ಮತ್ತು ಸಂಸ್ಕಾರ ಸ್ವಚ್ಛತೆ' ಧ್ಯೇಯದೊಂದಿಗೆ ಆಯೋಜಿಸಿದ್ದ, ಸ್ವಚ್ಛತಾ ಪಾಕ್ಷಿಕದಲ್ಲಿ, ಚಿಕ್ಕಮಗಳೂರು ಜಿಲ್ಲೆ, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಎಚ್.ಎಸ್. ಕೀರ್ತನಾ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಇಡೀ ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯಾದ್ಯಂತ, ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ 18 ಮಾನದಂಡಗಳಡಿ, ಸ್ಥಳಗಳನ್ನು ಶುಚಿಗೊಳಿಸಲಾಗಿದೆ, ಎಂದರು.

<><><>

ಸಿ.ಇ.ಓ. ಎಚ್.ಎಸ್. ಕೀರ್ತನಾ ಧ್ವನಿ 34 ಸೆಕೆಂದುಗಳು

<><><>

ಎಚ್.ಐ.ವಿ ಮತ್ತು ಏಡ್ಸ್ ಬಗ್ಗೆ ಜಾಗೃತಿ ಮೂಡಿಸಲು, ಬೆಳಗಾವಿಯಲ್ಲಿ ಇಂದು, ರಾಜ್ಯ ಮಟ್ಟದ 'ರೆಡ್ ರನ್ ಮ್ಯಾರಥಾನ್' ಆಯೋಜಿಸಲಾಗಿದೆ. ಎಚ್ಐವಿ ಏಡ್ಸ್ ನಿಯಂತ್ರಣ, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು ತಾರತಮ್ಯವನ್ನು ತಡೆಗಟ್ಟುವುದು, ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ ತಿಳಿಸಿದೆ. ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ವತಿಯಿಂದ, ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಿಂದ, ಬೆಳಗ್ಗೆ 6.30ಕ್ಕೆ ಮ್ಯಾರಥಾನ್ ಆರಂಭವಾಗಿದೆ.

ನಗರದ ಕೃ ಣ ದೇವರಾಯ ವೃತ್ತ ಹಾಗೂ ಕಿತ್ತೂರು ಚೆನ್ನಮ್ಮ ವೃತ್ತಗಳ ಮಾರ್ಗದಲ್ಲಿ, ಜಾಥಾ ತೆರಳಲಿದೆ.

<><><>

ಆಕಾಶವಾಣಿ ಹಾಗೂ ದೂರದರ್ಶನ, ತಮ್ಮ ಪ್ರಸಾರದಲ್ಲಿ, ರೈತರು ಮತ್ತು ಮಹಿಳೆಯರ ಕಾರ್ಯಕ್ರಮಗಳಿಗೆ, ಆದ್ಯತೆ ನೀಡುತ್ತಿವೆ ಎಂದು, ಕೇಂದ್ರದ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾಕ್ಟರ್ ಎಲ್. ಮುರುಗನ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿದರು. ವಿದ್ಯಾರ್ಥಿಗಳಿಗೆ ಉಪಯುಕ್ತ ಕಾರ್ಯಕ್ರಮಗಳು ಸೇರಿದಂತೆ, ಜನಪ್ರಿಯ ವ್ಯಕ್ತಿಗಳು, ರಾಜಕೀಯ ಮುತ್ಸದ್ದಿಗಳ ಚರ್ಚೆ ಮತ್ತು ಧ್ವನಿ ಪ್ರಸಾರದತ್ತ ಗಮನಹರಿಸುವಂತೆ, ಅವರು ಸಲಹೆ ನೀಡಿದರು. ಸಚಿವಾಲಯದ ಮಾಧ್ಯಮ ವಿಭಾಗಗಳು ಸೃಜಿಸುವ ಕಾರ್ಯಕ್ರಮಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಸಾಮಾಜಿಕ ಜಾಲತಾಣದಲ್ಲಿ ಕಾರ್ಯಕ್ರಮಗಳನ್ನು ಒದಗಿಸುವ ವ್ಯವಸ್ಥೆ ಕಲ್ಪಿಸುವಂತೆ, ಸಚಿವ ಮುರುಗನ್ ಸೂಚಿಸಿದರು.

<><><>

ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಸಚಿವರು ಭೇಟಿ ಮಾಡಿ, ಮಾತುಕತೆ ನಡೆಸಿದರು.

<><><>

ಮಲೆನಾಡಿನ ಕೃಷಿ ಮತ್ತು ತೋಟಗಾರಿಕೆ ಸಮಸ್ಯೆ ನಿವಾರಿಸಲು, ಆದ್ಯತೆ ಮೇಲೆ ಸಂಶೋಧನೆ ಹಾಗೂ ಕೃಷಿಕರನ್ನು ಸುದೃಢಗೊಳಿಸಬೇಕು ಎಂದು, ಆನಂದಪುರ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದ್ದಾರೆ.

‘ಪೌಷ್ಟಿಕ ಆಹಾರಕ್ಕಾಗಿ ವಿಕಸಿತ ಕೃಷಿ’ ಧ್ಯೇಯದೊಂದಿಗೆ, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನವುಲೆ ಕೃಷಿ ಕಾಲೇಜು ಆವರಣದಲ್ಲಿ ಆಯೋಜಿಸಿದ, ಕೃಷಿ–ತೋಟಗಾರಿಕೆ ಮೇಳವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ವಿಶ್ವ ವಿದ್ಯಾಲಯದ ಉಪ ಕುಲಪತಿ, ಆರ್.ಸಿ.ಜಗದೀಶ್ ಮಾತನಾಡಿ, ದೇಶದಲ್ಲೇ ಪ್ರಥಮ ಬಾರಿಗೆ, ಯುವ ರೈತರಿಗೆ ಡ್ರೋನ್ ಬಳಕೆ ತರಬೇತಿ ಆರಂಭಿಸಲಾಗಿದೆ ಎಂದರು. ಕೀಟಶಾಸ್ತ್ರ ವಿಭಾಗ, 30 ಪ್ರಭೇದಗಳ ಕೀಟ ಮಾಲಿಕೆ ಹಾಗೂ, ರೇಷ್ಮೆ ಹುಳು ಗೂಡಿನ ತ್ಯಾಜ್ಯದಿಂದ ತಯಾರಿಸಿದ ಹಾರ, ತೋರಣ ರೈತರ ಗಮನ ಸೆಳೆದವು.

<><><>

ಹೈನುಗಾರಿಕೆ ಮತ್ತು ಕೃಷಿಗೆ ಬೆನ್ನೆಲುಬಾದ, ರಾಸುಗಳ ಆರೋಗ್ಯ ಕಾಪಾಡಲು, ಪಶುಪಾಲನಾ ಇಲಾಖೆ, ಕಾಲು ಬಾಯಿ ರೋಗ ತಡೆಗೆ, ರಾಜ್ಯಾದ್ಯಂತ ಲಸಿಕೆ ನೀಡಲಿದೆ. ನಾಡಿದ್ದು 21 ರಿಂದ ನವೆಂಬರ್ 20ರ ವರೆಗೆ, ಬೆಳಗ್ಗೆ 6.30 ರಿಂದ 11 ಗಂಟೆ ವರೆಗೆ, ಜಾನುವಾರುಗಳಿಗೆ, ರಾಜ್ಯಾದ್ಯಂತ ಕಾಲುಬಾಯಿ ಲಸಿಕಾ ಕಾರ್ಯಕ್ರಮ ಆಯೋಜಿಸಲಾಗಿದೆ. ರೈತರು ತಮ್ಮ ಜಾನುವಾರುಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕೆಂದು, ಪಶು ಸಂಗೋಪನಾ ಇಲಾಖೆ ಮನವಿ ಮಾಡಿದೆ. ಒಟ್ಟು ಸಾವಿರದ 725 ಬ್ಲಾಕ್‌ಗಳಲ್ಲಿ, ಇಲಾಖೆ ಅಧಿಕಾರಿಗಳು ಹಾಗೂ ‘ಬಮೂಲ್’ 312 ಸಿಬ್ಬಂದಿ, ಈ ಕಾರ್ಯಕ್ರಮವನ್ನು, ಸಂಯೋಜಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ ಹಾಗೂ ತಿಪ್ಪೇಸ್ವಾಮಿ, ರಾಯಚೂರು ಹಾಗೂ ಸಿಂಧನೂರು ತಾಲೂಕಿನ ವಿವಿಧೆಡೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ, ಕೇಂದ್ರ ಆದಾಯ ತೆರಿಗೆ ಇಲಾಖೆಯ, ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಕಡತಗಳ ಪರಿಶೀಲನೆ ಆರಂಭಿಸಿದ್ದಾರೆ.

<><><>

ಹಾವೇರಿ ಜಿಲ್ಲೆ ಶಿಗ್ಗಾಂವ ಕ್ಷೇತ್ರದ ಉಪ ಚುನಾವಣೆಗೆ ಮೊದಲ ದಿನವಾದ ನಿನ್ನೆ, ಮೂವರು ಅಭ್ಯರ್ಥಿಗಳು ನಾಲ್ಕು ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

<><><>

ಚಿಕ್ಕಬಳ್ಳಾಪುರ, ಗೌರಿಬಿದನೂರು ರಸ್ತೆ ಮಾರ್ಗದ, ಉತ್ತರ ಪಿನಾಕಿನಿ ನದಿ ಸೇತುವೆ ಕಾಮಗಾರಿ, ಇಂದಿನಿಂದ ಆರಂಭವಾಗಲಿದ್ದು, ಪರ್ಯಾಯ ಮಾರ್ಗ ಬಳಸಲು ಸೂಚಿಸಲಾಗಿದೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ ದೇವರಾಜ ಅರಸು ಪದವಿ ಪೂರ್ವ ಕಾಲೇಜು ಆವರಣದಲ್ಲಿ, ಪದವಿ ಪೂರ್ವ ಕಾಲೇಜುಗಳ, ರಾಜ್ಯ ಮಟ್ಟದ ಯೋಗ ಪಂದ್ಯಾವಳಿ ಆಯೋಜಿತವಾಗಿದೆ.

<><><>

ಕೊಂಕಣಿ ಸಾಹಿತ್ಯ ಅಕಾದೆಮಿ, ವಾರ್ಷಿಕ ಪ್ರಶಸ್ತಿಗಳಿಗೆ, ಮಂಗಳೂರಿನ ಮಾರ್ಸೆಲ್ ಡಿಸೋಜಾ, ಮುಂಬೈನ ಹ್ಯಾರಿ ಫರ್ನಾಂಡಿಸ್, ಹಾಗೂ ಹೊನ್ನಾವರದ ಅಶೋಕ ದಾಮು ಕಾಸರಕೋಡ, ಆಯ್ಕೆಯಾಗಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬೆಳಗಾವಿ ಸುವರ್ಣ ಸೌಧದಲ್ಲಿ, ಡಿಸೆಂಬರ್ ನಲ್ಲಿ, ವಿಧಾನಮಂಡಲ ಚಳಿಗಾಲದ ಅಧಿವೇಶನ – ಯು.ಟಿ. ಖಾದರ್.
- ಕೃತಕ ಬುದ್ಧಿಮತ್ತೆ ಬಳಸಿ ಬೋಧಿಸುವ, 'ಶಿಕ್ಷಣ–ಕೋ ಪೈಲಟ್' ಯೋಜನೆ, ರಾಜ್ಯಾದ್ಯಂತ ಜಾರಿಗೆ – ಮಧು ಬಂಗಾರಪ್ಪ.
- ಸ್ವಚ್ಛತೆಯೇ ಸೇವೆ ಪಾಕ್ಷಿಕ; ಚಿಕ್ಕಮಗಳೂರು ರಾಜ್ಯಕ್ಕೆ ಪ್ರಥಮ – ಎಚ್.ಎಸ್. ಕೀರ್ತನಾ.
- ಎಚ್.ಐ.ವಿ/ಏಡ್ಸ್ ಜಾಗೃತಿಗಾಗಿ, ಬೆಳಗಾವಿಯಲ್ಲಿ ಇಂದು, 'ರೆಡ್ ರನ್ ಮ್ಯಾರಥಾನ್'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ